# ವಿವಾದಾತ್ಮಕ ಚಟುವಟಿಕೆಯಲ್ಲಿ ಎನ್‌ಜಿಒ: ಆತಂಕ

## ಡೆವಲಪ್‌ಮೆಂಟ್ ಡೈಲಾಗ್‌ನ ಅಂತಿಮ ಸಲಹೆ ಸಂವಾದದಲ್ಲಿ ಡಾ. ಗುರುರಾಜ ದೇಶಪಾಂಡೆ




ಡೆವಲಪ್‌ಮೆಂಟ್ ಡೈಲಾಗ್‌ನ ಅಂತಿಮ ಸಲಹೆ ಸಂವಾದದಲ್ಲಿ ಡಾ. ಗುರುರಾಜ ದೇಶಪಾಂಡೆ ಮಾತನಾಡಿದರು.

• **ಕನ್ನಡಪ್ರಭ ವಾರ್ತೆ** ಹುಬ್ಬಳ್ಳಿ

ವಿವಾದಾತ್ಮಕ ಚಟುವಟಿಕೆ, ಲಾಭಾಂಶದ ನಿರೀಕ್ಷೆಯಲ್ಲಿ ಕಾರ್ಯನಿರ್ವಹಣೆ, ಧ್ಯೇಯ ಮತ್ತು ಧೋರಣೆಯನ್ನು ಸಾಧಿಸುವಲ್ಲಿ ಎನ್‌ಜಿಒಗಳು ವಿಫಲವಾಗುತ್ತಿರುವುದು ಬೇಸರದ ಸಂಗತಿ ಎಂದು ದೇಶಪಾಂಡೆ ಫೌಂಡೇಶನ್‌ನ ಅಧ್ಯಕ್ಷ ಡಾ. ಗುರುರಾಜ ದೇಶಪಾಂಡೆ ಕಳವಳ ವ್ಯಕ್ತಪಡಿಸಿದರು.

ಬಿವಿಬಿ ಎಂಜಿನಿಯರಿಂಗ್ ಕಾಲೇಜಿನಲ್ಲಿ ನಡೆಯುತ್ತಿರುವ ದೇಶಪಾಂಡೆ ಫೌಂಡೇಶನ್‌ನ ಡೆವಲಪ್‌ಮೆಂಟ್ ಡೈಲಾಗ್‌ನ ಕೊನೆಯ ದಿನದ ಚರ್ಚೆಯ ಅಂತಿಮ ಸಲಹೆ ಸಂವಾದದಲ್ಲಿ ಅವರು ಮಾತನಾಡಿದರು.

ವಿವಾದಾತ್ಮಕ ಚಟುವಟಿಕೆಯಿಂದ ದೂರ ವುಳಿದು ಪಾರದರ್ಶಕವಾಗಿ ಪ್ರಾಮಾಣಿಕವಾಗಿ ಕಾರ್ಯನಿರ್ವ ಹಿಸುವ ಮೂಲಕ ಎನ್‌ಜಿಒಗಳು ಸದುದ್ದೇಶ

## ಯುವಕರನ್ನು ಸಮರ್ಥವಾಗಿ ಬಳಸಿಕೊಳ್ಳಿ

**ಹುಬ್ಬಳ್ಳಿ:** ಎನ್‌ಜಿಒಗಳು ಯುವಕರನ್ನು ಸಮರ್ಥವಾಗಿ ಬಳಸಿಕೊಳ್ಳಬೇಕು ಎಂದು ಯಸ್ ಬ್ಯಾಂಕ್‌ನ ಕ್ಲೈಮೇಟ್ ಸ್ಟ್ರಾಟರ್ಜಿ ಆ್ಯಂಡ್ ರೆಸ್ಪಾನ್ಸಿಬಲ್ ಬ್ಯಾಂಕಿಗ್ ಸಂಸ್ಥೆ ಮುಖ್ಯಸ್ಥೆ ನಮಿತಾ ವಿಕಾಸ್ ಹೇಳಿದರು.

ದೇಶಪಾಂಡೆ ಫೌಂಡೇಶನ್‌ನ ಡೆವಲಪ್‌ಮೆಂಟ್ ಡೈಲಾಗ್‌ನ ಸಿಎಸ್‌ಆರ್ ಸಮ್ಮಿಟ್ ಸಂವಾದದಲ್ಲಿ ಅವರು ಮಾತನಾಡಿ, ಯುವ ಸಮೂಹದ ಹೊಸ ಆಲೋಚನೆ, ಯೋಜನೆಗಳನ್ನು ಅನುಷ್ಠಾನಕ್ಕೆ ತರುವುದರಿಂದ ಯಶಸ್ಸು ಸಾಧ್ಯ. ಯುವಕರು ತಮ್ಮಲ್ಲಿರುವ ತಂತ್ರಜ್ಞಾನ ಕೌಶಲ್ಯದ ಮೂಲಕ

ಖರ್ಚು ಮಾಡುವಾಗ ಹತ್ತಾರು ಬಾರಿ ವಿಚಾರ ಮಾಡಬೇಕು ಎಂದು ಸಲಹೆ ನೀಡಿದರು.

ವೇದಾಂತ ರಿಸೋರ್ಸ್ ಲಿ. ನ ಸಿಎಸ್‌ಆರ್ (ಸಾಮಾಜಿಕ ಹೊಣೆಗಾರಿಕೆ) ಗ್ರೂಪ್ ಮುಖ್ಯಸ್ಥೆ ನೀಲಿಮಾ ಕೇತನ್ ಮಾತನಾಡಿ, ಕಾರ್ಪೋರೆಟ್ ಕಂಪನಿಗಳು ಚಿಕ್ಕ ಎನ್‌ಜಿಒಗಳ ಮೇಲೆ ದಬ್ಬಾಳಿಕೆ ಮಾಡಬಾರದು.

ಸಮಾಜ, ಪರಿಸರ, ಶಿಕ್ಷಣ, ಆರೋಗ್ಯ ಸೇವೆಯಲ್ಲಿ ಹೆಚ್ಚು ತೊಡಗಿ ಎನ್‌ಜಿಒಗಳಿಗೆ ಅಗತ್ಯ ಸಲಹೆ, ಸೂಚನೆ ನೀಡಬೇಕು. ಆ ಮೂಲಕ ಎನ್‌ಜಿಒಗಳ ಜೊತೆಗೆ ಉತ್ತಮ ಬಾಂಧವ್ಯ

## ಒಪ್ಪಂದದ ವೇಳೆ ಎಚ್ಚರಿಕೆ ಇರಲಿ: ಪಂತ್

**ಹುಬ್ಬಳ್ಳಿ:** ಒಪ್ಪಂದದ ವೇಳೆ ಎನ್‌ಜಿಒಗಳು ಅಗತ್ಯ ಮುನ್ನೆಚ್ಚರಿಕೆ ಕೈಗೊಳ್ಳದೆ ಇದ್ದರೆ ಸಿಎಸ್‌ಆರ್ ಅನುದಾನ ಕೈ ತಪ್ಪುವ ಸಾಧ್ಯತೆ ಇರುತ್ತದೆ ಎಂದು ಶಕ್ತಿಶಿ ಸಂಸ್ಥೆಯ ಮ್ಯಾನೇಜಿಂಗ್ ಪಾರ್ಟನರ್ ನಿಖಿಲ್ ಪಂತ್ ಎಚ್ಚರಿಸಿದರು.

ಡೆವಲಪ್‌ಮೆಂಟ್ ಡೈಲಾಗ್‌ನ ಸಿಎಸ್‌ಆರ್ ಇಂಡಿಯನ್ ಅಜೆಂಡಾ ಸಂವಾದದಲ್ಲಿ ಅವರು ಮಾತನಾಡಿ, ಎನ್‌ಜಿಒಗಳು ತಮ್ಮ ಕಾರ್ಯಗಳ ಯೋಜನಾ ವರದಿಯಲ್ಲಿ ನಿಖರ ಮಾಹಿತಿ ಹೊಂದಿರಬೇಕು. ಗುರಿ ಹಾಗೂ ಸೇವಾ ವ್ಯಾಪ್ತಿ ಕುರಿತು ವರದಿ ತಯಾರಿಸುವುದು ಸವಾಲಿನ ಕೆಲಸವಾಗಿದ್ದು ಈ ವೇಳೆ ಹೆಚ್ಚಿನ ಎಚ್ಚರಿಕೆ ವಹಿಸಬೇಕು ಎಂದರು. ಸಿಎಸ್‌ಆರ್ ಅನುದಾನ ಬಳಕೆ, ಸೇವಾ ಕಾರ್ಯದ ಬಗ್ಗೆ ಎನ್‌ಜಿಒಗಳು ಪೂರ್ವ ವರದಿ ಸಿದ್ಧಪಡಿಸಬೇಕು. ಅನೇಕ ಬಾರಿ ತಮ್ಮ ಸಾಮರ್ಥ್ಯ ಮೀರುವ ಯೋಜನೆಗೆ ಕೈ ಹಾಕಿ ಏಕಾಏಕಿ ಹೆಸರು ಮಾಡುವ ಧಾವಂತ ಎನ್‌ಜಿಒಗಳಿಗೆ ಸಾಮಾನ್ಯ. ಆದರೆ, ಸಾಕಷ್ಟು ಬಾರಿ ಅದರಿಂದ ಎಡವಿ ಬೀಳುವ ಸಾಧ್ಯತೆ ಇರುತ್ತದೆ. ಸಿಆರ್‌ಎಸ್ ಅನುದಾನವನ್ನು ಸದುಪಯೋಗ ಪಡಿಸಿಕೊಳ್ಳುವ ಜತೆಗೆ ಕಂಪನಿ ಹಿತ ಕಾಪಾಡುವಲ್ಲಿ ಎನ್‌ಜಿಒಗಳ ಪಾತ್ರ ಪ್ರಮುಖ. ಅಲ್ಲದೆ ಇದೇ ಕಾರ್ಯವೈಖರಿಯಿಂದ ಹೆಸರು ಗಳಿಸಲು ಎನ್‌ಜಿಒಗಳು ಮುಂದಾಗಬೇಕು ಎಂದರು. ಸರ್ಕಾರ ಕಾರ್ಪೋರೆಟ್ ಕಂಪನಿಗಳಿಗೆ ಸಿಎಸ್‌ಆರ್ ಅನುದಾನ ಬಳಕೆ ಮಾಡಿಕೊಳ್ಳುವಂತೆ ನಿರ್ದೇಶನ ಮಾಡುತ್ತವೆ. ಕಂಪನಿಗಳು ತಮ್ಮ ಸಿಎಸ್ ಆರ್ ಅನುದಾನವನ್ನು ಬಳಕೆ ಮಾಡಿಕೊಳ್ಳುವಲ್ಲಿ ನಿರ್ಲಕ್ಷ್ಯ ವಹಿಸುತ್ತಿವೆ. ಪ್ರತಿವರ್ಷ ಭಾರತದಲ್ಲಿ ₹15ಸಾವಿರ ಕೋಟಿ ಸಿಎಸ್‌ಆರ್ ಅನುದಾನ ಬಳಕೆ ಆಗದೇ ಹಾಗೆಯೇ ಉಳಿಯುತ್ತಿದ್ದು, ಸಮಾಜದ ಅಭಿವೃದ್ಧಿ ವೇಗಕ್ಕೆ ಕುಂಠಿತವಾಗಲು ಕಾರಣವಾಗಿದೆ ಎಂದರು. ಎನ್‌ಜಿಒಗಳು ಐಟಿಆರ್-7 ಫಾರ್ಮ್ ಕುರಿತು ನುರಿತ ಲೆಕ್ಕ ಪರಿಶೋಧಕರಿಂದ ಮಾಹಿತಿ ಪಡೆಯಬೇಕು ಎಂದರು.

### ನವೋದ್ಯಮಿಗಳಿಗೆ ದಾರಿದೀಪ: ವಿವೇಕ ಪವಾರ್

ಸಮಾರೋಪದಲ್ಲಿ ಮಾತನಾಡಿದ ದೇಶಪಾಂಡೆ ಫೌಂಡೇಶನ್ ಸಿಇಒ ವಿವೇಕ್ ಪವಾರ, ಡೆವಲಪ್‌ಮೆಂಟ್ ಡೈಲಾಗ್ ಕಾರ್ಯಾಗಾರ ಯಶಸ್ವಿಯಾಗಿದೆ. ದೇಶ ವಿದೇಶದ ಪ್ರಖ್ಯಾತ ಕಂಪನಿಗಳ ಮುಖ್ಯಸ್ಥರು ಸಂಪನ್ಮೂಲ ವ್ಯಕ್ತಿಗಳಾಗಿ ಭಾಗವಹಿಸಿ ನವೋದ್ಯಮಿಗಳಿಗೆ ಸಾಕಷ್ಟು ಸಲಹೆ ನೀಡಿದ್ದಾರೆ. ಅದನ್ನು ಅಳವಡಿಸಿಕೊಂಡು ಗೆಲುವಿನತ್ತ ಹೆಜ್ಜೆ ಇಡಿ ಎಂದು ಕರೆ ನೀಡಿದರು. ಕಾರ್ಯಾಗಾರದ ಕುರಿತು ಅಭಿಪ್ರಾಯ ತಿಳಿಸಿ ಎಂದರು.